ಪೋಲೀಸ್ ಇಲಾಖೆ

| | | | |
|---|---|---|---|
| ಪಿ ಎಸ್ ಐ ಗೌರಿ ಬಿ ಗ್ರಾಮಾಂತರ 74/2007, 05-07-07 | ಹೆಚ್ ನಾಗಸಂದ್ರ | 1500 ಲೀ ಸಾರಾಯಿ | ಕರೇತಿಮ್ಮಯ್ಯ ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿದೆ |
| ಪಿ ಎಸ್ ಐ ಗೌರಿ ಬಿ ಗ್ರಾಮಾಂತರ 75/2007, 06-07-07 | ಸಾಗಾನಹಳ್ಳಿ | 900 ಲೀ ಸಾರಾಯಿ | ಕೃಷ್ಣಪ್ಪ ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿದೆ |
| ಪಿ ಎಸ್ ಐ ಮಂಚೇನಹಳ್ಳಿ 83/2007, 06-07-07 | ತರಿದಾಳು ಗ್ರಾಮ | 20,800 ಲೀ ಸಾರಾಯಿ | ಒರಗೂರು ಕಿಟ್ಟಿ ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿದೆ |

ಆ) ಗೌರಿಬಿದನೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಗೂಂಡಾ ಕಾಯ್ದೆಯಡಿಯಲ್ಲಿ ಯಾವುದೇ ಮೊಕದ್ದಮೆ ಇದುವರೆಗೆ ಹೂಡಿರುವುದಿಲ್ಲ

ಇ) ದಿನಾಂಕ 04-07-2007 ರಂದು ಗೌರಿಬಿದನೂರು ತಾಲ್ಲೂಕಿನ ಹೆಚ್ ನಾಗಸಂದ್ರ ಗ್ರಾಮದಲ್ಲಿ ಅಕ್ರಮವಾಗಿ ಸಾರಾಯಿ ದಾಸ್ತಾನು ಮಾಡಿರುವ ಬಗ್ಗೆ ಬಂದ ಖಚಿತ ಬಾತ್ಮಿ ಮೇರೆಗೆ ತಹಶೀಲ್ದಾರ್ ಗೌರಿಬಿದನೂರು ತಾಲ್ಲೂಕು ಇವರು ಗೌರಿಬಿದನೂರು ವಲಯದ ಅಬಕಾರಿ ನಿರೀಕ್ಷಕರಿಗೆ ದೂರವಾಣಿ ಮುಖಾಂತರ ಮಾಹಿತಿ ತಿಳಿಸಿ ಕ್ರಮಕೈಗೊಳ್ಳುವಂತೆ ಸೂಚಿಸಿದ್ದರೂ, ವಲಯದ ಅಬಕಾರಿ ನಿರೀಕ್ಷಕರು ಈ ಕಾರ್ಯವನ್ನು ತಡವಾಗಿ ನಿರ್ವಹಿಸಿರುವ ಬಗ್ಗೆ ವರದಿ ಬಂದಿದ್ದು ದಿನಾಂಕ 13-07-2007 ರಂದು ಸಂಬಂಧಿಸಿದ ವಲಯದ ಅಬಕಾರಿ ನಿರೀಕ್ಷಕರಿಗೆ ಕೋಲಾರ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ನೋಟೀಸು ನೀಡಿ ಈ ಬಗ್ಗೆ ವಿವರಣೆಯನ್ನು ಕೂಡಲೇ ಸಲ್ಲಿಸುವಂತೆ ಸೂಚಿಸಿರುತ್ತಾರೆ

ಈ) ಸಂಬಂಧಪಟ್ಟ ಅಬಕಾರಿ ನಿರೀಕ್ಷಕರಿಂದ ವಿವರಣೆ ಸ್ವೀಕೃತವಾದ ನಂತರ ಪರಿಶೀಲಿಸಿ ನಿಯಮಗಳ ಅನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು

844(1304) ಶ್ರೀ ಶಿವಶಂಕರಪ್ಪ ಟಿ ಹೆಚ್ (ತರೀಕೆರೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ತರೀಕೆರೆ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿಗಾಗಿ ಎಷ್ಟು ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಉಳಿದಿರುತ್ತವೆ,

ಆ) ತರೀಕೆರೆ ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಗಳು ಇನ್ನೂ ಎಷ್ಟು ಬಾಕಿ ಇರುತ್ತವೆ ಹಾಗೂ ಸರ್ಕಾರದ ವತಿಯಿಂದ ಬಗರ್‌ಹುಕುಂ ಸಮಿತಿಯನ್ನು ನೇಮಕ ಮಾಡಲಾಗಿದೆಯೇ,

ಇ) ಮಾಡದಿದ್ದಲ್ಲಿ, ತರೀಕೆರೆ ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಮಿತಿ ನೇಮಕ ಮಾಡಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ತರೀಕೆರೆ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನು ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಲು ನಮೂನೆ 50ರಲ್ಲಿ ಒಟ್ಟು 12856 ಅರ್ಜಿಗಳು ಸ್ವೀಕೃತವಾಗಿದ್ದು, ಪೂರ್ಣವಾಗಿ ವಿಲೇವಾರಿಯಾಗಿರುತ್ತದೆ ನಮೂನೆ 53ರಲ್ಲಿ 17288 ಅರ್ಜಿಗಳು ಸ್ವೀಕೃತವಾಗಿದ್ದು, 5274 ಅರ್ಜಿಗಳು ವಿಲೇವಾರಿಗೆ ಬಾಕಿ ಇರುತ್ತವೆ

ಆ) ತರೀಕೆರೆ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮವಾಗಿ ಸಲ್ಲಿಸಿರುವ ನಮೂನೆ 53ರ ಒಟ್ಟು 5274 ಅರ್ಜಿಗಳು ವಿಲೇವಾರಿಗೆ ಬಾಕಿಯಿರುತ್ತವೆ ಪ್ರಸ್ತುತ ಬಗರ್ ಹುಕುಂ ಸಾಗುವಳಿ ಸಕ್ರಮ ಸಮಿತಿಯು ಪುನರ್ ರಚನೆಯಾಗಿರುವುದಿಲ್ಲ

ಇ) ಹೌದು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ

846(1299) ಶ್ರೀ ಸಿದ್ದುಸವದಿ (ಜಮಖಂಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಾರ್ವಜನಿಕರ ಸೌಕರ್ಯಗಳಿಗಾಗಿ ಖಾಸಗಿ ಮಾಲೀಕರ ಜಮೀನುಗಳನ್ನು ಖರೀದಿಸಲು (ಸ್ವಾಧೀನಪಡಿಸಿಕೊಳ್ಳಲು) ಪ್ರತಿ ಎಕರೆಗೆ ಸರ್ಕಾರ ನಿಗಧಿಗೊಳಿಸಿರುವ ಮೊತ್ತ ಎಷ್ಟು ,

ಆ) ಇತ್ತೀಚಿನ ದಿನಗಳಲ್ಲಿ ಭೂಮಿಯ ಬೆಲೆ ಗಗನಕ್ಕೆ ಏರಿರುವಾಗ ಸರ್ಕಾರ ನಿಗಧಿಪಡಿಸಿರುವ ಬೆಲೆ ಅತಿ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ಈಗಿರುವ ಬೆಲೆಯನ್ನು ಪರಿಷ್ಕರಿಸಲಾಗುವುದೇ, ಹಾಗಿದ್ದಲ್ಲಿ, ಎಂದಿನಿಂದ ಪರಿಷ್ಕರಿಸಲಾಗುವುದು,

ಈ) ಈ ಭೂಮಿಯ ಬೆಲೆಯನ್ನು ತಕ್ಷಣ ಹೆಚ್ಚಿಸದಿದ್ದಲ್ಲಿ ಅಥವಾ ಪ್ರಸ್ತುತ ಬೆಲೆಯಲ್ಲಿ ಖರೀದಿಸದೇ ಹೋದಲ್ಲಿ ಜಮೀನುಗಳು ಸಿಗುವುದಿಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ?